

ಗ್ರೀನ್‌ಪಾತ್

ಬೆಳೆಯಿತು. ಇಲ್ಲಿನ ದಟ್ಟ ಕಾಡುಗಳು ಕಪ್ಪು ಕರಡಿ, ಕಡವೆ, ಸಾಲಮಂಡರ್, ಹಾರುವ ಅಳಿಲಿನಂಥ ನೂರಾರು ವನ್ಯಜೀವಿಗಳ, ಹ್ಯಾಮ್ಲಾಕ್, ಬರ್ಚ್, ಓಕ್ ಅಲ್ಲದೆ ಅಪರೂಪದ ಆರ್ಕಿಡ್ ಸಸ್ಯ ಸಂಕುಲಗಳ ತವರುಮನೆಯಾಯಿತು.

ಸಾಮಾನ್ಯವಾಗಿ ಇಲ್ಲಿಗೆ ಬರುವ ಪ್ರವಾಸಿಗರು ಸಮೀಪದ ಗ್ಯಾಟ್ಲಿನ್‌ಬರ್ಗ್, ಪಿಜನ್ ಫೋರ್ಜ್, ಸೇವಿಯರ್‌ವಿಲ್ ನಂತಹ ಊರುಗಳಲ್ಲಿ ತಂಗುತ್ತಾರೆ. ಎಲ್ಲ ವರ್ಗದವರ ಬಜೆಟ್‌ಗೆ ಹೊಂದುವ ಕ್ಯಾಂಪ್ ಗ್ರೌಂಡ್, ಹಾಸ್ಟೆಲ್, ಹೋಟೆಲ್, ರೆಸಾರ್ಟ್ ಎಲ್ಲವೂ ಈ ಊರುಗಳಲ್ಲಿ ಲಭ್ಯ. ಆದರೆ 'ಸ್ವಲ್ಪ ಬೆಲೆ ಜಾಸ್ತಿ' ಎನಿಸುವ ಕ್ಯಾಬಿನ್‌ಗಳು ಇಲ್ಲಿ ಹೆಚ್ಚು ಜನಪ್ರಿಯ. ಒಂದು ಬೆಡ್‌ರೂಮ್‌ನಿಂದ ಹಿಡಿದು 20 ಬೆಡ್‌ರೂಮ್‌ಗಳಿರುವ ಕ್ಯಾಬಿನ್‌ಗಳನ್ನು ವಾರಗಟ್ಟಲೆ ಬಾಡಿಗೆ ಹಿಡಿದು ಕುಟುಂಬದವರೊಡನೆ ಮತ್ತು ಸ್ನೇಹಿತರೊಡನೆ ಇಲ್ಲಿ ರಜೆ ಕಳೆಯಬಹುದು.

ಪ್ರಕೃತಿಯ ನೈಜ ಸೌಂದರ್ಯಕ್ಕೆ ಧಕ್ಕೆ ಬರಬಾರದೆಂದು ಮರದ ದಿಮ್ಮಿಗಳಿಂದ ನಿರ್ಮಿಸಲಾದ ಈ ಕ್ಯಾಬಿನ್‌ಗಳಲ್ಲಿ ವಿಶಾಲವಾದ ಹಜಾರ, ಸುಸಜ್ಜಿತ ಅಡುಗೆ ಕೋಣೆ, ಮಲಗುವ ಮನೆ, ತಾಪಮಾನ ನಿಯಂತ್ರಿತ ಬಿಸಿ ನೀರಿನ ಟಬ್, ಬಾರ್ಬೆಕ್ಯು ಮತ್ತು ಹೋಂ ಥಿಯೇಟರ್‌ಗಳಿವೆ. ಫೂಸ್ಬಾಲ್, ಏರ್‌ಹಾಕಿ, ಪೂಲ್ ಟೇಬಲ್‌ಗಳಂತಹ ಒಳಾಂಗಣ ಆಟಗಳ ಗೇಮ್ ರೂಮ್‌ಗಳು ಎಲ್ಲ ಕ್ಯಾಬಿನ್‌ಗಳ ಆಕರ್ಷಣೆ. ಪ್ರತಿ ಕ್ಯಾಬಿನ್‌ಗಳಿಗೂ ಮುದ್ದಾದ ಸೂಕ್ತ ಹೆಸರುಗಳನ್ನು ಇಡಲಾಗಿದೆ.

ಈ ಕ್ಯಾಬಿನ್‌ಗಳ ಕೆಲವು ನಿಯಮಗಳು ತುಂಬಾ ಕಟ್ಟುನಿಟ್ಟು. ಗಲಾಟೆಯೆಂದು ನಿಮ್ಮ ನೆರೆಯವರು ದೂರು ಕೊಟ್ಟರೆ 150 ಡಾಲರ್‌ವರೆಗೆ ದಂಡ ತೆರಬೇಕು! ಯಾವುದೇ ಉಪಕರಣಗಳನ್ನು ಉಪಯೋಗಿಸುವ ಮೊದಲೇ ಪರೀಕ್ಷಿಸಿ ದೋಷವಿದ್ದರೆ ರೆಸಾರ್ಟ್ ಆಫೀಸ್‌ನಲ್ಲಿ ದಾಖಲಿಸಬೇಕು. ಅದರ ಮೇಲೆ, ದಿನದ ಬಾಡಿಗೆಯಲ್ಲದೆ ಕನಿಷ್ಠ 35 ಡಾಲರ್ ಕ್ಲೀನಿಂಗ್ ಶುಲ್ಕ ತೆರಬೇಕು. ಮೌಂಟ್ ಲಕೊಂಟ್‌ಗೆ ಎದುರಾಗಿ ನಾವಿದ್ದ ಪುಟ್ಟ ಕ್ಯಾಬಿನ್‌ನ ಹೆಸರು **unforgettable views.** ನಿಜಕ್ಕೂ ಅದು ಹೆಸರಿಗೆ ತಕ್ಕಂತಹ, ಮರೆಯಲಾಗದ ವಿಹಂಗಮ ನೋಟ ಕಲ್ಪಿಸಿತ್ತು.

## ಬರಿಯ ಪ್ರಕೃತಿಯಲ್ಲ

ಇಲ್ಲಿಗೆ ಬರುವವರೆಲ್ಲ ಬರೀ ಸುಮ್ಮನೆ ಕುಳಿತು ಪ್ರಕೃತಿಯನ್ನು ಅಸ್ವಾದಿಸುವವರಲ್ಲ. ಪ್ರವಾಸಿಗರಿಗಾಗಿ ಸುತ್ತಲಿನ ಗ್ಯಾಟ್ಲಿನ್‌ಬರ್ಗ್, ಚರೂಕಿ, ಪಿಜನ್ ಫೋರ್ಜ್‌ಗಳಲ್ಲಿ ಕ್ಯಾಂಪಿಂಗ್, ರಿವರ್ ರಾಫ್ಟಿಂಗ್, ಸೈಕ್ಲಿಂಗ್, ಝಿಪ್ ಲೈನಿಂಗ್, ಕುದುರೆ ಸವಾರಿ ಮತ್ತು ಚಳಿಗಾಲದಲ್ಲಿ ಸ್ಕೀಯಿಂಗ್ ಮಾಡಲು ಅವಕಾಶಗಳಿವೆ.

ಚಾರಣ ಪ್ರೇಮಿಗಳಿಗಂತೂ ಪ್ರಕೃತಿಯ ಹಾದಿಯಲ್ಲಿ ದಿನಗಟ್ಟಲೆ ನಡೆಯಲು ಸುಮಾರು 800 ಮೈಲುಗಳಷ್ಟು ಪ್ರಕೃತಿಯ ಜಾಡುಗಳಿವೆ. ನೇಚರ್ ಟ್ರೈಲ್ ಎನ್ನುವ ಈ ದಾರಿಗಳಲ್ಲಿ ಕೆಲವು ದುರ್ಗಮವೂ ಇನ್ನು ಕೆಲವು ಸುಲಭವೂ ಇದೆ. ಮಣಭಾರದ ಕ್ಯಾಮೆರಾ ಹಿಡಿದು ಒಂದಿಷ್ಟೂ ಆಯಾಸವಿಲ್ಲದೆ ಮೈಲುಗಟ್ಟಲೆ ನಡೆಯುತ್ತ. ಒಂದೆಡೆ ಕುಳಿತು ಹಕ್ಕಿಗಳಿಗಾಗಿ ಧ್ಯಾನಸ್ಥರಾಗುವ ವನ್ಯಜೀವಿ ಛಾಯಾಗ್ರಹಕರಿಗಂತೂ ಇಲ್ಲಿ ಸ್ಫೂರ್ತಿಗೆ ಕೊರತೆಯಿಲ್ಲ.

ಸ್ಮೋಕಿ ಮೌಂಟನ್ ವಿಸಿಟರ್ ಸೆಂಟರ್‌ನಲ್ಲಿ ಅಲಮ್ ಕೇವ್, ಚಿಮಿಣಿ ಟಾಪ್ಸ್, ಗ್ರೊಟ್ಟೋ ಫಾಲ್ಸ್, ಶುಗರ್‌ಲ್ಯಾಂಡ್ ಮುಂತಾದ ಜಾಡುಗಳ ನಕ್ಷೆಗಳು, ಇದನ್ನು ಕ್ರಮಿಸಲು ಬೇಕಾದ ಸಮಯ, ಮಾರ್ಗದರ್ಶನ ಎಲ್ಲವೂ ಲಭ್ಯ. 'ಸ್ಮೋಕಿ ಪರ್ವತಗಳು' ಯುನೆಸ್ಕೋ ವಿಶ್ವ ಪರಂಪರೆಯ ತಾಣವೂ ಹೌದು. ●